## ಕಾಕ್ಲಿಯಾರ್ ಇಂಪ್ಲಾಂಟ್ ಮಾಡಿಸಿಕೊಂಡ ಅಭ್ಯರ್ಥಿಗಳಿಗೆ ಶ್ರವಣ ವಿಜ್ಞಾನ ವಿಭಾಗದಲ್ಲಿ ದೊರೆಯುವ ಸೌಲಭ್ಯಗಳು

- ಕಾಕ್ಲಿಯಾರ್ ಇಂಪ್ಲಾಂಟ್ ಮಾಡಿಸಿಕೊಂಡ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಒದಗಿಸುವುದು.
- ಹೆಚ್ಚಿನ ಪರೀಕ್ಷೆಗಾಗಿ ಇಎನ್‌ಟಿ ಶಸ್ತ್ರ ಚಿಕಿತ್ಸರಿಗೆ ಉಲ್ಲೇಖಿಸುವುದು.
- ಕಾಕ್ಲಿಯಾರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಯ ನಂತರ ಸ್ವಿಚ್–ಆನ್ ಮಾಡಿಕೊಡುವುದು.
- ಮ್ಯಾಪಿಂಗ್/ನಕ್ಷೆ ತೆಗೆಯುವುದು
- ಕಾಕ್ಲಿಯಾರ್ ಇಂಪ್ಲಾಂಟ್ ದೋಷನಿವಾರಣೆ ಮಾಡಿಕೊಡುವುದು
- ಬಳಕೆ, ರಕ್ಷಣೆ ಮತ್ತು ಸಾಧನ ನಿರ್ವಹಣೆಯ ಬಗ್ಗೆ ಸಮಾಲೋಚನೆ ನಡೆಸುವುದು
- ಶಬ್ದಗಳನ್ನು/ಮಾತುಗಳನ್ನು ಆಲಿಸುವ/ ಕೇಳಿಸಿಕೊಳ್ಳುವ ಹಾಗೂ ಅವುಗಳಲ್ಲಿನ ವ್ಯತ್ಯಾಸಗಳನ್ನು ಗ್ರಹಿಸುವ ತರಬೇತಿ ಕೊಡಲಾಗುವುದು
- ಅವಶ್ಯಕತೆಯಿದ್ದಲ್ಲಿ ಇತರ ತಜ್ಞರಿಗೆ /ಮೈತ್ರಿಕೂಟದ ವೃತ್ತಿಪರರಿಗೆ ಸಂಪರ್ಕಿಸಲು ಅಭ್ಯರ್ಥಿಗೆ ಸಲಹೆ ಸೂಚನೆಗಳನ್ನು ಕೊಡುವುದು.



ಸರ್ವರೂ ಪರಿಣಾಮಕಾರಿ ಸಂವಹನಕ್ಕಾಗಿ ಶ್ರಮಿಸುವುದು

## ಶ್ರವಣ ವಿಜ್ಞಾನ ವಿಭಾಗದಲ್ಲಿ ದೊರೆಯುವ ಸೇವಾ

- ಶ್ರವಣ ತಪಾಸಣೆ
- ಶ್ರವಣ ಮೌಲ್ಯಮಾಪನ
- ಶ್ರವಣಯಂತ್ರಗಳ ಆಯ್ಕೆ
- ಶ್ರವಣೋಪಕರಣದಿಂದ ಉಂಟಾಗುವ ಪರಿಣಾಮದ ವಿಶ್ಲೇಷಣೆ
- ತೊಂದರೆ/ತರಬೇತಿಯ ಬಗ್ಗೆ ಸಮಾಲೋಚನೆ
- ಕೆಳಕಂಡ ಪ್ರಮಾಣ ಪತ್ರಗಳ ಹಂಚಿಕೆ :
  - ಅಸಾಮರ್ಥ್ಯ / ಅಂಗವಿಕಲತೆಯ ಪ್ರಮಾಣಪತ್ರ


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು

ಶ್ರವಣ ವಿಜ್ಞಾನ ವಿಭಾಗ
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – 570 006

ದೂರವಾಣಿ ಸಂ: 0821-2502000, 2502100, 2502704
ಟೋಲ್‌ಫ್ರೀ ಸಂ: 1800 425 5218, Fax: 2510515
ಈಮೇಲ್: director@aiishmysore.in
ವೆಬ್‌ಸೈಟ್ www.aiishmysore.in

ಕೆಲಸದ ವೇಳೆ: ಬೆಳಿಗ್ಗೆ ೯.೦೦ ಗಂಟೆಯಿಂದ ಸಂಜೆ ೫.೩೦ರ ತನಕ ಸೋಮವಾರದಿಂದ ಶುಕ್ರವಾರ, ಹಾಗೂ ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ


ಅಭಿವೃದ್ಧಿ: ಪ್ರೊ. ಆಶಾ ಯತಿರಾಜ್, ಕಿಷನ್ ಎಂ.ಎಂ, ಮತ್ತು ಮೇಘಾ
ಅನುವಾದ: ಸುಚಿತ್ರ ಎಂ.ಜಿ, ರೇವತಿ ಕೆ.ಆರ್, ಆರ್.ರಾಜಲಕ್ಷ್ಮೀ
ವಿನ್ಯಾಸ: ಮುಕ್ತಿ ಸುಬ್ರಹ್ಮಣ್ಯ
ವಸ್ತು ಅಭಿವೃದ್ಧಿ ವಿಭಾಗ / 2013




# ಕಾಕ್ಲಿಯಾರ್ ಇಂಪ್ಲಾಂಟ್ ಚಿಕಿತ್ಸೆಯನ್ನು ಪರಿಗಣಿಸುತ್ತೀರಾ???

ಅಖಿಲ ಭಾರತೀಯ ವಾಕ್ ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

## ಕಾಕ್ಲಿಯಾರ್ ಇಂಪ್ಲಾಂಟ್ ಎಂದರೇನು ?

- ಇದು ಎರಡು ಭಾಗಗಳನ್ನೊಳಗೊಂಡ ಒಂದು ಉಪಕರಣ/ಸಾಧನ. ಒಂದು, ಇಲೆಕ್ಟ್ರಾನಿಕ್ ಸಲಕರಣೆ / ಸಾಧನ. ಇದನ್ನು ಶಂಖನಾಳದಲ್ಲಿ ಅಳವಡಿಸಲಾಗುತ್ತದೆ. ಎರಡನೆಯದು, ಹೊರಕಿವಿಯ ಪಕ್ಕದಲ್ಲಿ ತಲೆಯ ಬದಿಯಲ್ಲಿ ಧರಿಸಲಾಗುವ ಉಪಕರಣ.



## ಯಾರು ಕಾಕ್ಲಿಯಾರ್ ಇಂಪ್ಲಾಂಟ್ ಮಾಡಿಸಿಕೊಳ್ಳಬಹುದು !

- ಕಡಿಮೆ ಶ್ರವಣಶಕ್ತಿ ಇರುವವರು, ಅಂದರೆ ಕಿವುಡುತನ ಪ್ರಮಾಣದಲ್ಲಿ ಹೆಚ್ಚಿರುವ ಹಾಗು ಶ್ರವಣೋಪಕರಣದಿಂದ ಯಾವ ಪ್ರಯೋಜನವನ್ನೂ ಪಡೆಯದಿದ್ದವರು.
- 6 ತಿಂಗಳಿಗೂ ಹೆಚ್ಚು ಕಾಲ ಶ್ರವಣ ಸಾಧನವನ್ನು ಬಳಸಿ ಕೇಳುವ / ಆಲಿಸುವ ಕೌಶಲವನ್ನು / ಫಲಿತಾಂಶವನ್ನು ಪಡೆಯದವರು.



## ಶಂಖನಾಳದ ಕಸಿಯು (ಕಾಕ್ಲಿಯರ್ ಇಂಪ್ಲಾಂಟ್) ಅಗತ್ಯವಿದೆ ಎಂದು ತಿಳಿಯಲು ಯಾವ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು ?

- ವಿವರವಾದ ಶ್ರವಣ ಪರೀಕ್ಷೆ
- ಶ್ರವಣ ಸಾಧನಗಳ ಪರೀಕ್ಷೆ
- ಮಾತು ಮತ್ತು ಭಾಷಾ ಪರೀಕ್ಷೆ
- ಮನೋವೈಜ್ಞಾನಿಕ ಪರೀಕ್ಷೆ
- ಇ.ಎನ್.ಟಿ ಸಮಾಲೋಚನೆ
- ವಿಕಿರಣ ಪರೀಕ್ಷೆ








## ಕಾಕ್ಲಿಯಾರ್ ಇಂಪ್ಲಾಂಟ್‌ನಿಂದಾಗುವ ಲಾಭಗಳೇನು?

- ನಿರಾತಂಕವಾಗಿ ಕೇಳಿಸಿಕೊಳ್ಳುವುದು
- ಸ್ಪಷ್ಟವಾಗಿ ಮಾತನಾಡಲು ಕಲಿಯುವುದು
- ಸ್ಪಷ್ಟವಾಗಿ ಮಾತನಾಡುವ ರೀತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು
- ಸಾಮಾನ್ಯ ಮಕ್ಕಳಂತೆ ವರ್ತಿಸಿ ಅವರೊಂದಿಗೆ ಬೆರೆತು ಸಾಮಾನ್ಯ ಶಾಲೆಗಳಲ್ಲಿ ಸೇರಿಕೊಳ್ಳುವುದು.



## ಕಾಕ್ಲಿಯಾರ್ ಇಂಪ್ಲಾಂಟ್ ಮಾಡಿಸಿಕೊಂಡ ನಂತರ ಅನುಸರಿಸಬೇಕಾದ ನಿಯಮಗಳು

- ಇಎನ್‌ಟಿ ಶಸ್ತ್ರತಜ್ಞರ ಅನುಮತಿ ಪಡೆದ ನಂತರವೇ ಈ ಸಾಧನವನ್ನು ಸ್ವಿಚ್–ಆನ್ ಮಾಡಬೇಕು.
- ಕೇಳಿಸಿಕೊಳ್ಳುವ / ಆಲಿಸುವ ತರಬೇತಿಯನ್ನು ನಿಯಮಿತವಾಗಿ ಪಡೆದುಕೊಳ್ಳಬೇಕು.
- ಕಿವಿಗೆ ಶ್ರವಣಯಂತ್ರದ ಅವಶ್ಯಕತೆ ಇದೆಯೇ ಅಥವಾ ಈ ಶಸ್ತ್ರಚಿಕಿತ್ಸೆಯ ಅಗತ್ಯವಿದೆಯೇ ಎಂಬುದನ್ನು ತಿಳಿಯಲು ಶ್ರವಣತಜ್ಞರನ್ನು ಸಂಪರ್ಕಿಸಿ ಸಲಹೆ/ಸೂಚನೆಗಳನ್ನು ಪಡೆದುಕೊಳ್ಳುವುದು.